

ಹದಿನೈದು ದಿನದಿಂದ ಮನೆಯಲ್ಲಿಯೇ ಇದ್ದ ರಾಜಪ್ಪನಿಗೆ ಇನ್ನು ಇಲ್ಲಿರಲು ಸಾಧ್ಯವೇ ಇಲ್ಲ ಎನ್ನಿಸಿ ಮನೆಗೆ ತುಸು ದೂರದಲ್ಲಿದ್ದ ಪಾರ್ಕ್‌ಗೆ ಹೋದ. ತಾನು ದಿನಾ ಕುಳಿತುಕೊಳ್ಳುತ್ತಿದ್ದ ಜಾಗದಲ್ಲಾದರೂ ಕೂರೋಣ ಎಂದೆನಿಸಿ ಮನೆಯಿಂದ ಹೊರ ಹೊರಟ. ಕಾಲಿಗೆ ಶೂ ಹಾಕಿಕೊಳ್ಳುವುದು ಭಾರವೆನಿಸಿ ತನ್ನ ಮಾಮೂಲಿ ಹವಾಯ್ ಚಪ್ಪಲಿಗಳನ್ನೇ ಕಾಲಿಗೆ ಪೇರಿಸಿಕೊಂಡು ಮನೆಯ ಬೀಗದ ಕೈಯನ್ನು ಹುಡುಕಿ, ಕೈಗೊಂದು ಛತ್ರಿ, ಬಗಲಿನ ಚೀಲಕ್ಕೊಂದು ನೀರಿನ ಬಾಟಲಿ ಹಾಕಿಕೊಂಡು ಪಾರ್ಕಿನ ಹಾದಿ ಹಿಡಿದ. ಅಲ್ಲೇ ಕೂಗಳತೆಯಲ್ಲಿದ್ದ ಮೋಹನನ ಮನೆ ಮುಂದೆ ಬಂದಾಗ ಅದೇ ನೀರವ ಮೌನ. ಮನೆ ಮುಂದೆ ನಾಲ್ಕಾರು ನಾಯಿಗಳು ಬಿಸಿಲ ಝಳಕ್ಕೆ ಹಾಗೇ ಸುಸ್ತಾಗಿ ಮುದುರಿಕೊಂಡಿದ್ದವು. ರಾಜಪ್ಪ ಅಲ್ಲೊಮ್ಮೆ ನಿಟ್ಟುಸಿರು ಬಿಟ್ಟು ಮುಂದೆ ನಡೆದ. ಅವನ ಕಾಲುಗಳು ಅವನಿಗೇ ಗೊತ್ತಿಲ್ಲದಂತೆ ಪಾರ್ಕ್‌ನಲ್ಲಿ ಅವರು ದಿನಾ ಸಂಜೆ ಕುಳಿತು ಕಾಲ ಕಳೆಯುತ್ತಿದ್ದ ಬೆಂಚಿನ ಸನಿಹಕ್ಕೆ ತಂದು ಬಿಟ್ಟಿತ್ತು. ಅಲ್ಲೇ ಕುಳಿತ ರಾಜಪ್ಪನಿಗೆ ಯಾಕೋ ಒಬ್ಬನೇ ಕೂಡುವುದು ಸಾಧ್ಯವೇ ಇಲ್ಲವೆನಿಸಿ ಹೊಟ್ಟೆಯೆಲ್ಲ ಕಲಸಿದಂತಾಗಲು ಶುರುವಾಯಿತು. ಅವನು ಹೀಗೆ ಈ ಪಾರ್ಕ್‌ನಲ್ಲಿ ಒಬ್ಬಂಟಿಯಾಗಿ ಕುಳಿತದ್ದೇ ಇಲ್ಲ. ಹಿಂದಕ್ಕೆ ಒರಗಿ ಹಾಗೇ ಕಣ್ಣುಮುಚ್ಚಿದ ರಾಜಪ್ಪನ ಕಣ್ಣಮುಂದೆ ಹಿಂದಿನದೆಲ್ಲವೂ ತೇಲಿ ಬಂದಿತ್ತು.

ರಾಯಚೂರು ನಗರದ ಎಲ್‌ಐಸಿ ಕಂಪನಿ ಕಚೇರಿಗೆ ತಾನು ಹೊಸದಾಗಿ ವರ್ಗವಾಗಿ ಬಂದಾಗ ಮೊದಲ ಮಾತುಗಳು ಆತ್ಮೀಯವಾದದ್ದು ಮೋಹನನೊಂದಿಗೆ. ಆತ ನನ್ನ ಮನೆ ಬಳಿಯೇ ಮನೆ ಹುಡುಕಿಕೊಟ್ಟಿದ್ದ. ತನ್ನ ಇಬ್ಬರು ಹೆಣ್ಣುಮಕ್ಕಳನ್ನು ದಡ ಸೇರಿಸಿ ಇನ್ನೆರಡು ವರ್ಷಗಳಲ್ಲಿ ರಿಟೈರ್ಡ್ ಆಗುವವನಿದ್ದ. ತನ್ನದೂ ಸರಿ ಸುಮಾರು ಅದೇ ವಯಸ್ಸು. ಇದ್ದ ಮಗನೊಬ್ಬ ಆಸ್ಟ್ರೇಲಿಯಾದಲ್ಲಿ ಸೆಟಲ್ ಆಗಿದ್ದ. ಹೆಂಡತಿ ತೀರಿಕೊಂಡು ಹತ್ತು ವರ್ಷವಾಗಿತ್ತು. ಯಾರನ್ನೂ ಅತಿಯಾಗಿ ಹಚ್ಚಿಕೊಳ್ಳಬಾರದು ಅಂತ ದೂರವಿದ್ದರೂ ಯಾಕೋ ಮೋಹನನ ಗೆಳೆತನ, ಅವನ ಮಾತು, ಆತ್ಮೀಯತೆಯ ಬಂಧದಿಂದ ಬಿಡಿಸಿಕೊಳ್ಳಲಾಗಿರಲಿಲ್ಲ. ಈ ಮನೆಗೆ ಬಂದಾಗಿನಿಂದ ಮೋಹನ, ದಿನಾ ದೇವರ ಮೇಲಿನ ಹೂ ಮರೆಯಾಗದಂತೆ ಸಂಜೆ ಆರು ಗಂಟೆಗೆ ವಾಕಿಂಗ್ ನೆಪ ಮಾಡಿ ಹೊರಟರೆ ಮತ್ತೆ ಮನೆ ಸೇರುತ್ತಿದ್ದದ್ದು ರಾತ್ರಿ ಒಂಬತ್ತಕ್ಕೆ. ವಾಕಿಂಗ್ ಮುಗಿಸಿ ಮೋಹನನ ಮನೆಯಲ್ಲಿ ಸಾರು ತಗೊಂಡು ಗೂಡು ಸೇರುತ್ತಿದ್ದೆ. ರಾತ್ರಿ ಸಾರು, ಪಲ್ಯ ನಿರಾಕರಿಸಬಾರದೆಂದು ಜೋರು ಮಾಡಿದ್ದರು. ಅವರ ಆತ್ಮೀಯ ಗದರಿಕೆಯ ಹಿಂದಿನ ಪ್ರೀತಿಯನ್ನು ಮನಗಂಡು ಒಪ್ಪಿಕೊಂಡಿದ್ದೆ. ರಾತ್ರಿ ಅನ್ನ ಮಾಡಿದರೆ ಬೆಳಗ್ಗೆಗೂ ಅದೇ ಆಗುತ್ತಿತ್ತು. ಮಧ್ಯಾಹ್ನ ಆಫೀಸ್‌ನ ಕ್ಯಾಂಟೀನ್‌ನಿಂದಲೇ ಏನಾದರೂ ತಿಂಡಿ ತಿನ್ನುತ್ತಿದ್ದೆ. ವಾರದ ಕೊನೆಗೊಮ್ಮೆ ಮಗ ದೂರ ದೇಶದಿಂದ ಫೋನಾಯಿಸಿ 'ಟೇಕ್ ಕೇರ್' ಅನ್ನುತ್ತಿದ್ದ! ಮೊಮ್ಮಕ್ಕಳ ಮಾತು ಕೇಳಿ ಇಡೀ ವಾರ ಕಾಲ ನೂಕುತ್ತಿದ್ದೆ. ಹೀಗೆ ಯಾವುದೇ ಆತಂಕವಿಲ್ಲದೆ ಸಾಗುತ್ತಿದ್ದ ನಮ್ಮ ಗೆಳೆತನಕ್ಕೆ ಅದ್ಯಾವ ದಿಟ್ಟಿಯಾಯಿತೋ? ಮೋಹನ ಹದಿನೈದು ದಿನದ ಹಿಂದೆ ಹಾರ್ಟ್ ಅಟ್ಯಾಕ್ ಆಗಿ ತೀರಿಕೊಂಡಿದ್ದ. ವಿಷಯ ಕೇಳಿ ದಿಗ್ಭ್ರಮೆಗೊಂಡರೂ ವಿಷಕಂಠನಂತೆ ದುಃಖ ನುಂಗಿ ಗೆಳೆಯನ ಮನೆಯ ಕಣ್ಣೀರಿಗೆ ಜೊತೆಯಾಗಿದ್ದೆ.

ಸಾವಿನ ಮನೆಗೆ ಹೋಗಿ ದಿನಾ ಗೆಳೆಯನ ಹುಡುಕುವ ವ್ಯರ್ಥ ಪ್ರಯತ್ನ ಬಿಟ್ಟು ಪಾರ್ಕ್‌ಗೆ ಬಂದು ಕುಳಿತಿದ್ದವನಿಗೆ ಕಣ್ಣ ಮುಂದಿನದೆಲ್ಲಾ ಕನಸೋ ನನಸೋ ಅಂತ ಒಮ್ಮೆ ವಾಸ್ತವಕ್ಕೆ ಬಂದ. ಸುತ್ತಲೂ ಹಾಗೇ ಕಣ್ಣಾಡಿಸಿದ. ಬಿಸಿಲಿಗೆ ಪಾರ್ಕ್‌ನಲ್ಲಿದ್ದ ಗಿಡಮರಗಳೆಲ್ಲಾ ಪ್ಲಾಸ್ಟಿಕ್‌ನವೇನೋ ಎನ್ನುವಂತೆ ನಿಂತಿದ್ದವು. ಬರಬರನೆ ದೇಶವನ್ನೇ ಸುತ್ತುವಂತೆ ಸುತ್ತುತ್ತಿರುವ ಮಧ್ಯವಯಸ್ಸಿನ ಗಂಡಸರು, ಕಿವಿಗೆ ಮೊಬೈಲ್‌ನಿಂದ ಹಾಡು ಕೇಳುತ್ತಾ ಸಾಗುತ್ತಿರುವ ಕೆಲವರು, ಮನೆಯ ಕಷ್ಟಸುಖಗಳನ್ನೆಲ್ಲಾ ತಮ್ಮ ಹೊಟ್ಟೆಯಿಂದ ಆಚೆ ಹಾಕುತ್ತಾ ತುಂಬು ಗರ್ಭಿಣಿಯರಂತೆ ನಿಧಾನಕ್ಕೆ ಹೆಜ್ಜೆ ಹಾಕುತ್ತಿರುವ ಮಧ್ಯವಯಸ್ಸಿನ ಹೆಂಗಸರು, ಪುಟ್ಟ ಮಕ್ಕಳನ್ನೆಲ್ಲಾ ಅಲ್ಲೇ ಆಡಲು ಬಿಟ್ಟು ತನ್ನ ಗಂಡನ ಮನೆಯವರನ್ನು ವಾಚಾಮಗೋಚರ ಬೈಯುತ್ತಿರುವ ಸೊಸೆಯಂದಿರು, ಈ ಲೋಕದ ವ್ಯವಹಾರವನ್ನೆಲ್ಲಾ ಮುಗಿಸಿ ಹೋಗಲು ತಯಾರಾಗಿರುವವರಂತೆ ತಮ್ಮ ಊರುಗೋಲುಗಳನ್ನು ನಿಧಾನಕ್ಕೆ ಎತ್ತಿಡುತ್ತಾ ಸಾಗುತ್ತಿರುವ ವೃದ್ಧರು. ಹೀಗೇ ಕಣ್ಣ ಮುಂದಿನ ದೃಶ್ಯಗಳನ್ನೆಲ್ಲಾ ನೋಡುತ್ತಾ ಕುಳಿತ ರಾಜಪ್ಪ ಮೋಹನನನ್ನೇ ಧ್ಯಾನಿಸುತ್ತಾ ಕುಳಿತಿದ್ದು ನಂತರ ಮನೆಗೆ ಬಂದು ಅನ್ನ ಸಾರು ಮಾಡಿ ತಿಂದು ಮಲಗಿದ.

ಆ ದಿನ ಮಧ್ಯಾಹ್ನವೇ ಮಳೆ ಬಂದು ನಿಂತಿತ್ತು. ಧಗೆ ಹೆಚ್ಚಾಗಿತ್ತು. ಪಾರ್ಕ್‌ನ ಅದೇ ಮಾಮೂಲಿ ಸ್ಥಳಕ್ಕೆ ರಾಜಪ್ಪ ಬಂದು ಕುಳಿತ. ಯಾಕೋ ಮನೆ, ಆಫೀಸು ಎಲ್ಲಾ ಕಡೆ ಒಂಟಿತನ ಕಾಡಲು ಶುರುವಾಗಿತ್ತು. ಹೆಂಡತಿ ಸತ್ತಾಗಲೂ ಆಗದ ದುಃಖದ ತೀವ್ರತೆ ಮೋಹನನನ್ನು ಕಳೆದುಕೊಂಡ ಮೇಲೆ ಆಗಿದ್ದು ರಾಜಪ್ಪನಿಗಾದ ವಯಸ್ಸಿನ ಸಹಜ ಗುಣವೇನೋ. ಮತ್ತದೇ ಪಾರ್ಕ್‌ನ ಚಿತ್ರಣವನ್ನು ತಲ್ಲೀನನಾಗಿ ನೋಡುತ್ತಾ ಕುಳಿತ ಹಾಗೇ ಮಂಪರು. ಯಾರೋ ತನ್ನ ಪಕ್ಕ ಕುಳಿತಂತೆ ಭಾಸವಾಯಿತು. ಮಧ್ಯವಯಸ್ಕನೋ, ಅಥವಾ ಯುವಕನೋ ಅರಿಯದಂತಹ ಮುಖ ಭಾವ, ಮುಖದಲ್ಲಿ ಅದೇನೋ ಒಂದು ರೀತಿಯ ಸಂತೃಪ್ತಿ, ಮೆಲುನಗೆ. 'ನಾನಿಲ್ಲಿ ಕುಳಿತದ್ದು ನಿಮಗೆ ಇರಿಟೇಟ್ ಆಗಿಲ್ಲ ಅಂದುಕೊಳ್ತೀನಿ. ನೀವು ನಿಮ್ಮ ಗೆಳೆಯನನ್ನು ಕಳಕೊಂಡ ದುಃಖವನ್ನು ಮುಖದಲ್ಲಿ ಕಾಣುತ್ತಿದ್ದೇನೆ. ದಿನಾ ವಾಕ್ ಮಾಡಿದ್ರೆ ಆರೋಗ್ಯ ಚೆನ್ನಾಗಿರುತ್ತೆ ಅಂತ ವೈದ್ಯರು ಹೇಳ್ತಾರೆ ಅಂತ ವಾಕ್ ಮಾಡಿದ್ದೇ ಮಾಡಿದ್ದು, ಆದ್ರೂ ಹಾರ್ಟ್‌ಅಟ್ಯಾಕ್ ಆಗೋದು ಅಂದ್ರೆ ಏನು? ಹೋಗಲಿ ಬಿಡಿ... ಅಲ್ಲಿ ನೋಡಿ ದೂರದಲ್ಲಿ....ಒಂದು ಜೋಡಿ ಕುಳಿತಿದ್ದಾರಲ್ಲಾ ಅವರಿಗೆ ಈ ಇಹಲೋಕದ ಪರಿವೆಯೇನಾದ್ರೂ ಇದೆಯಾ ನೋಡಿ'. 'ರಾಜಪ್ಪ ಆ ಕಡೆ ತಿರುಗಿ ನೋಡಿದ. ಅವರಿಬ್ಬರು ಸುಮಾರು ಇಪ್ಪತ್ತರ ಹರೆಯದವರು. ಅಕ್ಕಪಕ್ಕ ಕುಳಿತಿದ್ದರೂ ಜನ ಕಾಣದಾದಾಗಲೆಲ್ಲಾ ಆ ಹುಡುಗ ಬಾಗಿ ಅವಳನ್ನು ಚುಂಬಿಸುತ್ತಿದ್ದ. ಹುಡುಗಿ ನಾಚಿದಂತೆ, ಹೆದರಿದಂತೆ ದೂರ ಸರಿದರೂ ಮತ್ತೆ ಮತ್ತೆ ಅದನ್ನೇ ಬಯಸುವವಳಂತೆ ಕಣ್ಣುಗಳಲ್ಲಿಯೇ ಆಹ್ವಾನಿಸುತ್ತಿದ್ದಳು.

'ಛೇ ಛೇ ಕಾಲ ಕೆಟ್ಹೋಯ್ತು. ನಮ್ಮ ಕಾಲದಲ್ಲಿ ಹೀಗೆಲ್ಲಾ ಎಲ್ಲಿತ್ತು? ಈ ಲವ್ ಗಿವ್ ಎಲ್ಲಾ? ಮುಚ್ಚಿದ ಕದಗಳ ಹಿಂದೆ ಮಾಡಬೇಕಾದದ್ದೆಲ್ಲಾ ಹೀಗೆ ಬೀದಿಗೆ ಬಂದಿರುವುದರಿಂದಲೇ ಸಣ್ಣ ಮಕ್ಕಳು ಲವ್ವು ಅಂತ ಕುಲಗೆಟ್ಟು ಹೋಗಿರೊದು... ಅಂದ ಹಾಗೇ ನಿಮ್ಮ ಹೆಸರೇನು?' ರಾಜಪ್ಪನ ಪ್ರಶ್ನೆಗೆ 'ಹೆಸರಲ್ಲಿ ಏನಿದೆ ಬಿಡಿ. ಇವತ್ತಿದ್ದು ನಾಳೆ ಮಣ್ಣು ಸೇರೋ ಜೀವಕ್ಕೆ ಏನು ಹೆಸರಿದ್ರೂ ಅಷ್ಟೆ. ಉಸಿರು ನಿಂತ ಕ್ಷಣದಿಂದಲೇ ದೇಹ ಆಗುವ ನಮಗೆ ಯಾವ ಹೆಸರಾದರೇನು? ಆ ಜೋಡಿ ನೋಡಿ ಜನ ನೋಡ್ತಾರೆ ಅನ್ನೋ ಹೆದರಿಕೆಗಿಂತ ಬದುಕಿನ ಬಗ್ಗೆ, ನಾಳೆಯ ಜೀವನ ಕಟ್ಟುವ ಉತ್ಸಾಹದಲ್ಲಿ ಈ ಕ್ಷಣವನ್ನು ಅನುಭವಿಸುತ್ತಿದ್ದಾರಲ್ಲಾ ಅದು ಮುಖ್ಯ. ಎಲ್ಲಾ ಕಾಲದಲ್ಲೂ ಪ್ರೀತಿ, ಪ್ರೇಮ ಇರಲಿಲ್ಲವೇ? ನಿಮಗೆ ಲವ್ ಮಾಡುವ ಧೈರ್ಯ ಇರಲಿಲ್ಲ ಅಷ್ಟೆ. ಅದು ಬಿಡಿ ಅಲ್ಲಿ ನೋಡಿ ಅದೇ... ಆ ಆಟದ ಮೈದಾನದಲ್ಲಿ ಮಗುವನ್ನು ಬಿಟ್ಟು ಅಲ್ಲೇ ಕಣ್ಣಿಗೆ ಕಣ್ಣಿಟ್ಟು ಕಾಯುತ್ತ ಕುಳಿತಿದ್ದಾಳಲ್ಲಾ? ಕಾಣಿಸಿದಳಾ ಆ ಹುಡುಗಿ?' ಆತನ ಪ್ರಶ್ನೆಗೆ ಪುಂಗಿ ನಾದಕ್ಕೆ ಸೋತ ನಾಗರಿನಂತೆ ರಾಜಪ್ಪ 'ಇಲ್ಲ' ಎಂದ. 'ಹೇ ಸರಿಯಾಗಿ ನೋಡಿ. ಆಕೆ ನಿಮ್ಮ ಮನೆಯ ಕೊನೆಯಲ್ಲೇ ಇರುವವಳು. ಮದುವೆಯಾಗಿ ಎಂಟು ವರ್ಷವಾದರೂ ಮಕ್ಕಳಾಗಲಿಲ್ಲ ಅಂತ ಹೋಗದ ದೇವರಿಲ್ಲ, ಮಾಡದ ಪೂಜೆಗಳಿಲ್ಲ. ಬಾಂಬೆಗೆ ಹೋಗಿ ತೋರಿಸದ ಡಾಕ್ಟರ್‌ಗಳಿಲ್ಲ. ಅಂತೂ ಈಗೊಂದು ಮಗುವಾಗಿದೆ. ಹೋ ಮಗು ಮುದ್ದಾಗಿದೆ. ಆಕೆ ಬಸುರಿಯಿದ್ದಾಗ ಇದೇ ಪಾರ್ಕ್‌ನಲ್ಲೇ ವಾಕ್ ಮಾಡುತ್ತಿದ್ದಳು ನೋಡಿದ್ದೇನೆ. ಹೋಗಲಿ ಬಿಡಿ ಅಂತೂ ಒಂದು ಮಗು ಅಂತ ಆಯ್ತಲ್ಲಾ. ಅವಳ ಗಂಡ, ಮನೆಯವರು ಖುಷಿಯಾಗಿರಬೇಕಲ್ಲಾ?' ರಾಜಪ್ಪನ ಪ್ರಶ್ನೆಗೆ 'ಹೂಂ ಎಲ್ಲರಿಗೂ ಖುಷಿನೇ. ಆದರೆ ಆ ಮಗು ಆಕೆಯ ಗಂಡನದ್ದಲ್ಲ'. ಹೊಟ್ಟೆಯೊಳಗಿನ ಯಾವುದೋ ಖಜಾನೆಯನ್ನು ಹೊರಗೆಡವುವವನಂತೆ ಆತ ಹೇಳಿದ. ಆ ಮಾತನ್ನು ಗಣನೆಗೆ ತೆಗೆದುಕೊಳ್ಳದವನಂತೆ 'ಅದು ಈಗೆಲ್ಲಾ ಕಾಮನ್ ಅಲ್ಲವಾ? ಸರೋಗೇಟೆಡ್ ಮದರ್, ಅಂಡಾಣು, ವೀರ್ಯಾಣು ದಾನ ಪಡೆದು ಮಕ್ಕಳನ್ನು ಪಡೆಯಿರಿ ಅಂತ ಎಷ್ಟೊಂದು ಜಾಹೀರಾತುಗಳು ಬರ್ತವೆ'.

ರಾಜಪ್ಪ ಹೇಳಿದ ಮಾತನ್ನು ಅರ್ಧಕ್ಕೆ ತುಂಡರಿಸಿ 'ನೀನು ಹೇಳಿದ್ದು ನಿಜ ಅದಕ್ಕೆ ಗಂಡ, ಹೆಂಡತಿಯ ಒಪ್ಪಿಗೆ ಇರಬೇಕು. ಇಲ್ಲ ಅಂದ್ರೆ ಡಾಕ್ಟರುಗಳು ಜೈಲು ಸೇರಬೇಕಾಗುತ್ತೆ. ಆದರೆ ಇದು ಆ ಕೇಸ್ ಅಲ್ಲ. ತನ್ನ ಗೆಳತಿಯ ಸಹಾಯ ಪಡೆದು ಒಬ್ಬ ಗಂಡಸಿನ ಜೊತೆ ಮಲಗಿ ಮಾಡಿಕೊಂಡ ಕೂಸಿದು.